# ಎಲ್ಲಿರುವನೋ ರಂಗ ಎಂಬ ಸಂಶಯ ಬೇಡ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 112.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 283.
3. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchha Rayaru, page No. 102.
4. **Note:** Lyrics given below are as per Ref. 1. The wordings in Ref. 2 are same as in Ref. 1. The wordings in Ref. 3 are almost similar to Ref. 1, with minor variations, which are not considered here.
5. **Note:** Singer has followed these wordings.

ರಾಗ: ಕಲ್ಯಾಣಿ ತಾಳ: ಅಟ

ಎಲ್ಲಿರುವನೋ ರಂಗನೆಂಬ ಸಂಶಯ ಬೇಡ
ಎಲ್ಲಿ ಭಕ್ತರು ಕರೆದರಲ್ಲೇ ಬಂದೊದಗುವನು ॥ ಪ ॥

ತರಳ ಪ್ರಹ್ಲಾದ ಶ್ರೀಹರಿ ವಿಶ್ವಮಯನೆಂದು
ಬರೆದೋದಲವನ ಪಿತ ಕೋಪದಿಂದ
ಸ್ಥಿರವಾದಡೀ ಕಂಭದೊಳು ತೋರು ತೋರೆನಲು
ಭರದಿ ಬರಲದಕೆ ವೈಕುಂಠ ನೆರೆಮನೆಯೆ ॥ 1 ॥

ಪಾಪ ಕರ್ಮವ ಮಾಡಿದಜಮಿಳನ ಯಮಭಟರು
ಕೋಪದಿಂದೆಳೆಯುತಿರೆ ಭೀತಿಯಿಂದ
ತಾ ಪುತ್ರನನು ಕರೆಯೆ ಕೇಳಿ ರಕ್ಷಿಸೆ ಶ್ವೇತ
ದ್ವೀಪವೀ ಧರೆಗತಿ ಸಮೀಪದಲ್ಲಿಹುದೆ ॥ 2 ॥

ಕರಿರಾಜನನು ನೆಗಳು ನುಂಗುತಿರೆ ಭಯದಿಂದ
ಮೊರೆಯಿಡಲು ಕೇಳಿ ಅತಿ ತ್ವರಿತದಿಂದ

ಕರುಣದಲಿ ಬಂಧನವ ಬಿಡಿಸಲಾ ಗಜರಾಜ
ನಿರುವ ಸರಸಿಗೆ ಅನಂತಾಸನವು ಮುಮ್ಮನೆಯೆ ॥ 3 ॥

ಕುರುಪತಿಯು ದ್ರೌಪದಿಯ ಸೀರೆಯನು ಸೆಳೆಯುತಿರೆ
ತರುಣಿ ಹಾ ಕೃಷ್ಣಾ ಎಂದೊದರೆ ಕೇಳಿ
ಭರದಿಂದ ಅಕ್ಷಯಾಂಬರವನಿತ್ತ
ಹಸ್ತಿನಾಪುರಿಗು ದ್ವಾರಾವತಿಗು ಕೂಗಳತೆಯೇ ॥ 4 ॥

ಅಣು ಮಹತ್ತುಗಳಲ್ಲಿ ಪರಿಪೂರ್ಣನೆಂದೆನಿಸಿ
ಗಣನೆಯಿಲ್ಲದ ಮಹಾ ಮಹಿಮನೆನಿಪ
ಘನ ಕೃಪಾನಿಧಿ ನಮ್ಮ ಪುರಂದರ ವಿಠಲನು
ನೆನೆದವರ ಮನದಲ್ಲಿ ಇಹನೆಂಬ ಬಿರುದಿರಲು ॥ 5 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ವಿಷ್ಣುವಿನ ಮೂರು ಸ್ಥಾನಗಳು ವೈಕುಂಠ, ಶ್ವೇತದ್ವೀಪ, ಅನಮತಾಸನ, ಇವು ಭೂಮಿಗೆ ತುಂಬಾ ದೂರದಲ್ಲಿದ್ದರೂ, ಭೂಮಿಯ ಮೇಲಿರುವ ಭಕ್ತರ ಹೃದಯದಲ್ಲೇ ಅಂತರ್ಯಾಮಿಯಾಗಿಯೂ ಇರುವನಾದ್ದರಿಂದ, ಭಕ್ತರು ಕರೆದಾಗ ಓ ಎನ್ನುವನು, ಅವರ ಆಪತ್ತಿನ ವೇಳೆಗೆ ಒದಗಿಬಂದು ನೆರವಾಗುವನು. ಪ್ರಹ್ಲಾದ, ಅಜಾಮಿಳ, ಗಜೇಂದ್ರ, ದ್ರೌಪದಿ ಇವರಿಗೆ ಅವನು ಒಲಿದ ಪ್ರಸಂಗಗಳನ್ನು ನಿದರ್ಶನವಾಗಿ ಹೇಳಿದ್ದಾರೆ.

**ತರಳ** – ಹುಡುಗ.

**ನೆಗಳು** – ಮೊಸಳೆ.

**ಅನಂತಾಸನ, ಶ್ವೇತ ದ್ವೀಪ, ವೈಕುಂಠ** = ಶ್ರೀಹರಿಯ ತ್ರಿಧಾಮಾಗಳು

**ಮುಮ್ಮನೆ** = ಮನೆಯ ಮುಂದು, ಪಡಸಾಲೆ

**ಅಣು** = ವಸ್ತುವಿನ ಅತಿ ಚಿಕ್ಕ ಕಣ

**ಮಹತ್ತು =** ಅತಿ ದೊಡ್ಡ ವಸ್ತು

**Classification:** Keerthane
**Ankita:** purandara vittala
**Location:** NA
**Category:** Artha Bhava
**Sub-Category:** ranga, anumana, prahallada, loka, tande, sittu, vaikunta, mane, papa, karma, ajamila, yama, bhaya, putra, bhumi, gaja, mosale, karuna, kourava, draupadi, Krishna, Akshaya, aNu, mana,
**Pravachana:** NA
**Explanation:** NA